ಖಾಸಗಿ ವೈದ್ಯಕೀಯ ಕಾಲೇಜುಗಳ ಮಂಜೂರಾತಿ

೨೫೫. ಶ್ರೀ ಎಂ. ವಿ. ವೆಂಕಟಪ್ಪ (ಮುಳಬಾಗಿಲು).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಖಾಸಗಿ ವೈದ್ಯಕೀಯ ಕಾಲೇಜು ತೆರೆಯಲು ಸರ್ಕಾರದ ಮುಂದಿರುವ ಬಾಕಿ ಅರ್ಜಿಗಳೆಷ್ಟು ?

ಆ) ರಾಜ್ಯದಲ್ಲಿ ಯಾವುದಾದರೂ ಖಾಸಗಿ ವೈದ್ಯಕೀಯ ಕಾಲೇಜಿನ ಮಂಜೂರಾತಿಗಾಗಿ ಪ್ರಸ್ತಾವನೆ ಇದೆಯೇ ?

ಇ) ಇದ್ದಲ್ಲಿ ಅದು ಯಾವುದು ?

ಈ) ಖಾಸಗಿ ವೈದ್ಯಕೀಯ ಕಾಲೇಜಿನಲ್ಲಿ ಕಾಣಿಕೆ ಶುಲ್ಕ ವಸೂಲಾತಿಯ ಬಗ್ಗೆ ಯಾವುದಾದರೂ ದೂರುಗಳು ಸರ್ಕಾರಕ್ಕೆ ಬಂದಿದೆಯೇ ?

ಉ) ಹಾಗಿದ್ದಲ್ಲಿ ಇದರ ಬಗ್ಗೆ ಸರ್ಕಾರವು ತೆಗೆದುಕೊಂಡ ಕ್ರಮಗಳೇನು ?

ಶ್ರೀಮತಿ ಮನೋರಮಾ ಮಧ್ವರಾಜ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವೆಯರು).—

ಅ) ೮

ಆ) ಇಲ್ಲ

ಇ) ಪ್ರಶ್ನೆ (ಅ)ಗೆ ಉತ್ತರಿಸಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ನಿರ್ದಿಷ್ಟವಾದ ದೂರುಗಳು ಸರ್ಕಾರಕ್ಕೆ ಬಂದಿಲ್ಲ.

ಉ) ಪ್ರಶ್ನೆ (ಈ)ಗೆ ಉತ್ತರಿಸಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಎಂ. ವಿ. ವೆಂಕಟಪ್ಪ.—ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ೮ ಅರ್ಜಿಗಳು ಬಂದಿವೆ ಎಂದು ಹೇಳಿದ್ದಾರೆ. ಈ ೮ ಅರ್ಜಿಗಳು ಯಾವ ಯಾವ ಜಿಲ್ಲೆಯಿಂದ ಬಂದಿದೆ ಎಂದು ಹೇಳುತ್ತಾರೆಯೇ ?

ಶ್ರೀಮತಿ ಮನೋರಮಾ ಮಧ್ವರಾಜ್.—ಸಹ್ಯಾದ್ರಿ ವಿದ್ಯಾ ಸಂಸ್ಥೆ ಶಿವಮೊಗ್ಗ, ನ್ಯಾಷನಲ್ ಎಜುಕೇಷನ್ ಸೊಸೈಟಿ ಶಿವಮೊಗ್ಗ, ಫಾದರ್ ಮುಲ್ಲರ್ ಇನ್‌ಸ್ಟಿಟ್ಯೂಟ್, ಕಂಕನಾಡಿ, ಮಂಗಳೂರು, ಅಕಾಡೆಮಿ ಆಫ್ ಲಿಬರಲ್ ಎಜುಕೇಷನ್, ಕೆವಿಜಿ ಮೆಮೋರಿಯಲ್ ಹಾಲ್ ಸುಳ್ಯ ಮಂಗಳೂರು, ವಿಟ್ಲ ವಿದ್ಯಾಸಂಸ್ಥೆ ಮಂಗಳೂರು, ಶ್ರೀ ಮುರುಗರಾಜೇಂದ್ರ ವಿದ್ಯಾಪೀಠ ಚಿತ್ರದುರ್ಗ ಮಹಾತ್ಮಗಾಂಧಿ ವಿದ್ಯಾಪೀಠ ಬೆಂಗಳೂರು. ಶ್ರೀ ಸಿದ್ದಗಂಗಾ ವಿದ್ಯಾಸಂಸ್ಥೆ ತುಮಕೂರು.

ಶ್ರೀ ಎಂ. ವಿ. ವೆಂಕಟಪ್ಪ.—ಸದ್ಯಕ್ಕೆ ಅದಕ್ಕೆ ಸ್ಯಾಂಕ್ಷನ್ ಕೊಡುವ ಚಾನ್ಸಸ್ ಇಲ್ಲ ಎಂದು ಹೇಳಿದ್ದೀರಿ. ಅದು ಈ ಅಕೆಡೆಮಿಕ್ ಇಯರ್‌ಗೆ ಇಲ್ಲವೊ ಅಥವಾ ಪರ್ಮನೆಂಟಾಗಿ ಇಲ್ಲವೊ ಎನ್ನುವುದನ್ನು ಹೇಳಬೇಕು.

ಶ್ರೀಮತಿ ಮನೋರಮಾ ಮಧ್ವರಾಜ್.—ಈ ಅಕೆಡೆಮಿಕ್ ಇಯರ್‌ಗೆ ಇಲ್ಲ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಅಧ್ಯಕ್ಷರೆ, ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿ ಯಾವ ರೀತಿ ಶುಲ್ಕವನ್ನು ವಸೂಲು ಮಾಡಬೇಕು ಎನ್ನುವುದರ ಬಗ್ಗೆ ಮತ್ತು ದೇಣಿಗೆಗಳನ್ನು ವಸೂಲು ಮಾಡ ಬಾರದು ಎನ್ನುವುದರ ಬಗ್ಗೆ ಕಾನೂನನ್ನು ಸರ್ಕಾರ ಮಾಡಿದೆ. ವಾಸ್ತವಿಕವಾಗಿ ಯಾವುದೇ ರಸೀದಿ ಕೊಡದೆ ಖಾಸಗಿ ವೈದ್ಯಕೀಯ ಕಾಲೇಜುಗಳು ಫೀಸ್‌ಗಳನ್ನು, ದಾನಗಳನ್ನು ಮತ್ತು ಡೊನೇಷನ್ ಗಳನ್ನು ತೆಗೆದುಕೊಳ್ಳುತ್ತಾ ಇದ್ದಾರೆ.

ಅಧ್ಯಕ್ಷರು.—ಇದು ಹೊಸ ಕಾಲೇಜುಗಳ ಮಂಜೂರಾತಿಗೆ ಸಂಬಂಧಪಟ್ಟ ಪ್ರಶ್ನೆ. ಅದರ ಮೇಲೆ ಉಪ ಪ್ರಶ್ನೆ ಇದ್ದರೆ ಕೇಳಿ.

ಶ್ರೀ ಕಾಗೋಡು ತಿಮ್ಮಪ್ಪ.—ಇಲ್ಲಿದೆ. ರಿಲೇವೆಂಟ್ ಆಗಿದೆ.

ಅಧ್ಯಕ್ಷರು.—ರಿಲೆವೆಂಟ್ ಬಹಳ ಇದೆ.

ಶ್ರೀ ಕಾಗೋಡು ತಿಮ್ಮಪ್ಪ.—ಇಲ್ಲಿದೆ ಅಧ್ಯಕ್ಷರೆ ;

ಅಧ್ಯಕ್ಷರು.—ಎಷ್ಟು ಅಪ್ಲಿಕೇಷನ್ ಬಂದಿದೆ ಅಂದರು, ೮ ಅಪ್ಲಿಕೇಷನ್ ಬಂದಿದೆ ಎಂದು ಹೇಳಿದ್ದಾರೆ.

SRI KAGODU THIMMAPPA.—It is there in the question (d):

"Whether the Government has received any complaints regarding the collection of capitation fee in Medical Colleges in the State." ಎನ್ನುವ ಪ್ರಶ್ನೆಗೆ ಉತ್ತರವಾಗಿ "ಇಲ್ಲ" ಎಂದು ಹೇಳಿದ್ದಾರೆ. ಕ್ಯಾಪಿಟೇಷನ್ ಫೀ ವಸೂಲು ಮಾಡತಕ್ಕ ಬಗ್ಗೆ ದೂರು ಬಂದಿಲ್ಲ ಎಂದು ಹೇಳಿದ್ದಾರೆ. ಇದಕ್ಕಿಂತ ಮೋಸ ಇನ್ನೊಂದು ಇಲ್ಲ. ಕಾನೂನು ಇದ್ದಾಗಲೂ ಕೂಡ ರಶೀದಿಗಳನ್ನು ಕೊಡದೆ ಡೊನೇಷನ್ ಅನ್ನು ಸಾರೋದ್ಧಾರವಾಗಿ ಖಾಸಗೀ ಕಾಲೇಜಿನವರು ವಸೂಲು ಮಾಡುತ್ತಿದ್ದಾರೆ. ನಾವು ಕಾನೂನು ಇಟ್ಟುಕೊಂಡರೆ ದೂರು ಬಂದಿಲ್ಲ ಎಂದು ಹೇಳುವುದು ಸರಿಯಲ್ಲ. ಇದರ ಬಗ್ಗೆ ವಿಶೇಷ ಅಧಿಕಾರಿಗಳನ್ನು ಪ್ರತಿಯೊಂದು ಕಾಲೇಜಿಗೂ ನೇಮಿಸಿ ಹಣ ವಸೂಲು ಮಾಡುವುದನ್ನು ನಿಲ್ಲಿಸುವುದಕ್ಕೆ ಪ್ರಯತ್ನ ಪಡುತ್ತೀರಾ ?

ಶ್ರೀಮತಿ ವಂನೋರಮ್ಮಾ ಮಧ್ವರಾಜ್.—ಮಾನ್ಯ ಸಭಾಧ್ಯಕ್ಷರೆ, ಈ ಕ್ಯಾಪಿಟೇಷನ್ ತಂಟ್ಲವನ್ನು ಹಿಂದಿನ ಸರ್ಕಾರವೇ ರದ್ದು ಮಾಡಿತ್ತು. ಈಗ ಕಾಲೇಜಿನವರು ಟ್ಯೂಷನ್ ಫೀ ಮಾತ್ರ ತೆಗೆದುಕೊಳ್ಳುತ್ತಾರೆ. ಡೊನೇಷನ್ ಬಗ್ಗೆ ಹೆತ್ತವರಿಂದ ನಮಗೆ ದೂರು ಬಂದಿಲ್ಲ. ದೂರು ಏನಾದರು ಬಂದರೆ ನಾವು ಖಂಡಿತವಾಗಿ ಕ್ರಮ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು.—ನೀವು ಕ್ಯಾಪಿಟೇಷನ್ ರದ್ದು ಮಾಡಿದ್ದೀರಿ. ಡೊನೇಷನ್ ರದ್ದು ಮಾಡಿಲ್ಲ ಅಂತ ಕಾಣುತ್ತೆ. Some of the medical colleges have been extracting money. The Government has abolished capitation fee. alright. The previous Government did it. But donations continue.

SRI KAGODU THIMMAPPA.—There is a wider definition. ಸರ್ಕಾರದಿಂದ ಈ ರೀತಿ ಉತ್ತರ ಕೊಟ್ಟರೆ, ಅವರಿಗೆ ಇನ್ನೊಂದು ಪರ್ಮಿಷನ್ ಕೊಟ್ಟಂತಾಗುತ್ತದೆ. ಇರತಕ್ಕ ಕಾನೂನು ತೆಗೆಯಿರಿ, ಇಲ್ಲದೆ ಹೋದರೆ ಆ ಕಾನೂನಿನ ಪ್ರಕಾರ ಸರಿಯಾದ ಕ್ರಮ ತೆಗೆದುಕೊಳ್ಳಿ. Why should they bear all this fraud when the Government knows that the fraud is going on ?

MR. SPEAKER.—It amounts to self-deception of the worst kind.

ಶ್ರೀ ಎಂ. ಮಹದೇವ್.—ಮೆಡಿಕಲ್ ಕಾಲೇಜುಗಳು ಈಗ ಶ್ರೀಮಂತರ ವ್ಯವಹಾರ ಇದ್ದಂತೆ ಆಗಿದೆ. ಡೊನೇಷನ್ ಕೊಟ್ಟವರೂ ಹೇಳುವುದಿಲ್ಲ, ತೆಗೆದುಕೊಂಡವರೂ ಹೇಳುವುದಿಲ್ಲ. ಆ ಪರಿಸ್ಥಿತಿ ಇದೆ.

ಶ್ರೀ ಕರಿಯಣ್ಣ.—ಅಧಿಕೃತವಾಗಿ ಸರ್ಕಾರವೇ ಅವರಿಗೆ ಡೊನೇಷನ್ ಕೊಟ್ಟಂತೆ ಆಗಿದೆ. ಜೊತೆಗೆ ಮತ್ತೊಂದು ರೀತಿಯಲ್ಲಿ ಖಾಸಗೀ ಕಾಲೇಜಿನವರು ಡೊನೇಷನ್ ತೆಗೆದುಕೊಳ್ಳುತ್ತಾರೆ. ಇಂತಹ ಕಾನೂನನ್ನು ತೆಗೆದುಹಾಕಬೇಕು. ಇಲ್ಲವೇ ಸಮರ್ಪಕವಾದ ರೀತಿಯಲ್ಲಿ ಕ್ರಮ ತೆಗೆದುಕೊಳ್ಳಬೇಕು.

ಶ್ರೀಮತಿ ವಂನೋರಮಾ ಮಧ್ವರಾಜ್.— ಈ ವಿಚಾರದಲ್ಲಿ ನಿರ್ದಿಷ್ಟವಾದ ದೂರುಗಳು ಬಂದರೆ ನಾವು ಖಂಡಿತವಾಗಿ ಕ್ರಮ ತೆಗೆದುಕೊಳ್ಳುತ್ತೇನೆ. ಅದಕ್ಕೋಸ್ಕರವೇ ಕ್ಯಾಬಿನೆಟ್ ಸಬ್ ಕಮಿಟಿ ಮಾಡಿದ್ದೇವೆ. ನಾನು ಹಿಂದೆ ಹೇಳಿದಂತೆ ಇದರ ಸಾಧಕ ಬಾಧಕ ನೋಡಿ ಒಂದು ತೀರ್ಮಾನಕ್ಕೆ ಬರಲಿಕ್ಕೆ ಸಿದ್ಧರಿದ್ದೇವೆ.

SRI M. BLASIUS D'SOUZA.—Mr. Speaker, is it to say that the Hon. Minister is ignorant that they are taking donations heavy donations for medical seats ?

MR. SPEAKER.— Why don't you re-frame your question ? Instead of saying 'ignorant' why don't you say 'whether it has come to the notice of the Hon. Minister' ?

SRI M. BLASIUS D' SOUZA.—The Hon. Minister said somebody should complain.

MR. SPEAKER.—Yes. "Has anybody complained" You can frame that question in a different way without offending the Hon. Minister. I would not like her to be offended.

SRI M. BLASIUS D' SOUZA.—I would put it in this way: Whether it has come to the notice of the Hon. Minister that heavy donations are taken by the Medical colleges ?

ಶ್ರೀಮತಿ ಮನೋರಮಾ ಮಧ್ವರಾಜ್.—ನನ್ನ ಗಮನಕ್ಕೆ ಬಂದಿಲ್ಲ, ಅಂಥ ಬ್ರಹ್ಮಜ್ಞಾನ ಕೂಡ ನನಗೆ ಇಲ್ಲ.

ಶ್ರೀ ಹೆಚ್. ವಿಕಾಂತಯ್ಯ.—ಮಾನ್ಯ ಅಧ್ಯಕ್ಷರೆ, ಈಗ ಮಾರುಕಟ್ಟೆಯಲ್ಲಿ ದವಸಧಾನ್ಯಗಳನ್ನು ಮಾರುವುದಕ್ಕೆ ಖರೀದಿದಾರರಿಂದ ಟ್ಯಾಕ್ಸ್ ಪಡೆಯಬೇಕು, ರೈತರಿಂದ ಪಡೆಯಬಾರದು ಎಂದು ಕಾನೂನು ಮಾಡಲಾಯಿತು. ಆದರೆ ಟ್ಯಾಕ್ಸ್ ಪಡೆಯುವಾಗ ರೈತರಿಂದಲೂ ಪಡೆದರು, ಖರೀದಿದಾರರಿಂದಲೂ ಪಡೆದರು. ಅದೇ ರೀತಿ ಈ ವಿದ್ಯಾ ಕ್ಷೇತ್ರದಲ್ಲೂ ಆಗಿದೆ. ಕ್ಯಾಪಿಟೇಷನ್ "ಫಿ" ಇಲ್ಲದಿದ್ದರೂ ಟ್ಯೂಷನ್ ಫೀ ಹೆಚ್ಚು ಮಾಡಿದ್ದಾರೆ, ಜೊತೆಗೆ ಕ್ಯಾಪಿಟೆಶನ್ ಫೀ ಕೂಡ ತೆಗೆದುಕೊಳ್ಳುತ್ತಿದ್ದಾರೆ. ಡೊನೇಷನ್ ಕೊಟ್ಟರೆ ಕಾಲೇಜಿಗೆ ಸೇರುವಂಥ ಸಂದರ್ಭದಲ್ಲಿ ಇದರ ಬಗ್ಗೆ ನಿಯಂತ್ರಣ ಮಾಡಲಿಲ್ಲ. ಇಪತ್ತು ಪಾಸಗೀ ಮೆಡಿಕಲ್ ಕಾಲೇಜುಗಳಿಗೆ ಹೋಗಿ ಅರ್ಜಿ ಕೇಳಿದರೆ ಕೊಡುವುದಿಲ್ಲ. ಡಣ ಕೊಟ್ಟರೆ ಕ್ಯಾಪಿಟೇಷನ್ ಫೀ ಕೊಟ್ಟರೆ ಮಾತ್ರ ಅರ್ಜಿ ಕೊಡುತ್ತೇವೆಂದು ಹೇಳುವ ಪರಿಸ್ಥಿತಿ ಉಂಟಾಗಿದೆ. ಆದ್ದರಿಂದ ಕಾಲೇಜಿಗೆ ಸೇರುವಂತಹ ಸಂದರ್ಭದಲ್ಲಿ ರೆಗ್ಯುಲೇಷನ್ ಮುಖಾಂತರ ನಿಯಂತ್ರಣ ಮಾಡುವಂಥ ಒಂದು ಮನಸ್ಸು ಸರ್ಕಾರಕ್ಕೆ ಇದೆಯೇ ?

ಶ್ರೀಮತಿ ಮನೋರಮಾ ಮಧ್ವರಾಜ್.—ಯಾವ ಕಾಲೇಜಿನಲ್ಲಿ ತಮಗೆ ಫಾರಂ ಕೊಡಲಿಕ್ಕೆ ಒಪ್ಪಿಲ್ಲ ಎಂಬುದನ್ನು ನಮ್ಮ ಗಮನಕ್ಕೆ ತೆಗೆದುಕೊಂಡು ಬನ್ನಿ ಅದನ್ನು ಬಿಟ್ಟು.....

ಶ್ರೀ ಹೆಚ್. ವಿಕಾಂತಯ್ಯ.—ಈಗ ಪರಿಸ್ಥಿತಿ ಏನಿದೆ ಅಂದರೆ, ಈಗ ತಾವು ೨೫ ಸಾವಿರ ರೂಪಾಯಿ ಕಟ್ಟಿದರೆ ಮೆರಿಟ್ ಮೇಲೆ ಸೀಟು ಕೊಡಬೇಕೆಂದು ಹೇಳುತ್ತೀರಿ. ನಾವು ಕೊಡುವುದಕ್ಕೆ ಹೋದರೆ ಅವರು ಕಟ್ಟಿಸಿಕೊಳ್ಳುವುದಿಲ್ಲ. ಅವರು ಅರ್ಜಿಯನ್ನೇ ಕೊಡುವುದಿಲ್ಲ. ಇದರ ಬಗ್ಗೆ ನಿಯಂತ್ರಣ ಮಾಡಲಿಕ್ಕೆ ಮನಸ್ಸು ಏನಾದರೂ ಸರ್ಕಾರಕ್ಕೆ ಇದೆಯೇ ?

ಅಧ್ಯಕ್ಷರು.—ಆರೋಗ್ಯ ಇಲಾಖೆಯ ಡಿಮ್ಯಾಂಡ್ ಬಂದಾಗ ಈ ಪ್ರಶ್ನೆಗಳ ಬಗ್ಗೆ ತಾವುಗಳು ಚರ್ಚೆ ಮಾಡಿ.

ಮಂಗಳೂರಿನಲ್ಲಿರುವ ಸರಕಾರಿ ವೆನ್‌ಲಾಕ್ ಆಸ್ಪತ್ರೆಯಲ್ಲಿ ಫಾರ್ಮಸಿ ಮುಚ್ಚಿರುವುದು

೬೩೫. ಶ್ರೀ ಬಿ. ಎ. ಡಿಸೋಜ (ಮಂಗಳೂರು).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮಂಗಳೂರು ವೆನ್‌ಲಾಕ್ ಆಸ್ಪತ್ರೆಯು ಫಾರ್ಮಸಿ ಘಟಕವು ಮುಚ್ಚಿರುವ ವಿಷಯ ಸರ್ಕಾರಕ್ಕೆ ತಿಳಿದಿದೆಯೇ ?

ಆ) ಹಾಗಿದ್ದಲ್ಲಿ ಕಾರಣವೇನು ?

ಇ) ಪುನಃ ಯಾವಾಗ ಪ್ರಾರಂಭಿಸಲಾಗುವುದು ?

ಶ್ರೀಮತಿ ಮನೋರಮಾ ಮಾಧ್ವರಾಜ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು).—

ಅ) ಹೌದು.

ಆ) ಔಷಧ ನಿಯಂತ್ರಕರು ದಿನಾಂಕ ೧೭-೧೨-೮೦ ರಂದು ಪರವಾನಿ ನೀಡುವ ಬಗ್ಗೆ ವೆನ್‌ಲಾಕ್ ಆಸ್ಪತ್ರೆಯನ್ನು ತಪಾಸಣೆ ಮಾಡಿ ಅದರಲ್ಲಿ ಕೆಲವು ನ್ಯೂನತೆಗಳನ್ನು ಗುರ್ತಿಸಿರುವುದರಿಂದ ಈ ಘಟಕದಲ್ಲಿ ಔಷಧ ತಯಾರಿಕೆಯನ್ನು ಔಷಧ ನಿಯಂತ್ರಕರು ನಿಲ್ಲಿಸಿರುತ್ತಾರೆ.